# <u>ಆಡಿದನೋಕುಳಿಯ ನಮ್ಮ ರಂಗ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page no.: 110
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no.: 39
3. **Note:** Lyrics given without highlights are as per Ref. 2. The wordings given in yellow highlights are as per Ref. 1. These are slightly different.
4. **Note:** Singer has followed the lyrics as in Ref. 2.

| | |
|---|---|
| ರಾಗ: ಪೂರ್ವಿ ತಾಳ: ಅಟ | ರಾಗ: ಮಧ್ಯಮಾವತಿ ತಾಳ: ಆದಿ |
| ಆಡಿದನೋಕುಳಿಯ ನಮ್ಮ ರಂಗ | ಆಡಿದನೋಕುಳಿಯ ನಮ್ಮ ರಂಗ |
| ಆಡಿದನೋಕುಳಿಯ \|\| ಪ \|\| | ಆಡಿದನೋಕುಳಿಯ |
| ರಂಬಿಸಿ ಕರೆದು ಚುಂಬಿಸಿ ಒಗೆದನು | |
| ರಂಭೇರಿಗೋಕುಳಿಯ \|\| ಅಪ \|\| | |
| ಕದಂಬ ಕಸ್ತೂರಿಯ ಅಳಿ- | ಕುಂದದ ಕಸ್ತೂರಿಯ ಅಳಿ- |
| ಗಂಧದ ಓಕುಳಿಯ | ಗಂಧದ ಓಕುಳಿಯ |
| ಬಂದರು ಹೊರಗಿನ್ನಾರೇರಾ- | ಬಂದರು ಹೊರಗಿನ ನಾರಿಯರಾಡುತಾ |
| ಡುತಂದಚೆಂದದಿ ಓಕುಳಿಯ \|\| 1 \|\| | ಚೆಂದದ ಜೀಕುಳಿಯ |
| ಪಟ್ಟೆ ಮಂಚದ ಮೇಲೆ ನಮ್ಮ ರಂಗ | ಪಟ್ಟೆ ಮಂಚದ ಮೇಲೆ ನಮ್ಮ ರಂಗ |
| ಇಟ್ಟ ಮುತ್ತಿನ ಹಾರ | ಇಟ್ಟ ಮುತ್ತಿನ ಹಾರ |
| ಬಟ್ಟ ಕುಚಕ್ಕೆ ಕಣ್ಣಿಟ್ಟೊಗೆದನು | ಬಟ್ಟ ಕುಚಕೆ ಕಣ್ಣಿಟ್ಟು ಒಗೆದನು |
| ಕುಟ್ಟಿದನೋಕುಳಿಯ \|\| 2 \|\| | ಕುಟ್ಟಿದನೋಕುಳಿಯ |
| ಆರ್ಹತ್ತುಸಾವಿರ ಗೋಪ | ಆರು ಹತ್ತು ಸಾವಿರ ಗೋಪ |
| ಸ್ತ್ರೀಯರೆಲ್ಲರ ಕೂಡೆ | ನಾರಿಯರನು ಕೂಡಿ |
| ಮಾರನಯ್ಯ ಶ್ರೀ ಪುರಂದರ ವಿಠಲ | ಮಾರನಯ್ಯ ಶ್ರೀ ಪುರಂದರ ವಿಠಲ |

ಹರಿಸಿ ಒಕುಳಿಯ || 3 || ಹಾರಿಸಿ ಜೀಕುಳಿಯ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ಕೃಷ್ಣನು ಜಲಕ್ರೀಡೆಯನ್ನಾಡಿದ ರೀತಿಯು ಈ ಹಾಡಿನಲ್ಲಿ ವರ್ಣಿತವಾಗಿದೆ.

**ಅಳಿಗಂಧ** = ಹೂವಿನ ಹುಡಿ (ಅಳಿಗಳ ಗಂಧ)

**ಜೀಕುಳಿ** = ಚೀಕಳಿ = ಜೀರ್ಕೊಳವಿ, ಪಿಚಕಾರಿ, ನೀರು-ಓಕಳಿ ಸಿಂಪಡಿಸುವ ಕೊಳವೆ

**ಬಟ್ಟ** = ವೃತ್ತ, ದುಂಡು, ದುಂಡಗಾದ, ವಲಯಾಕಾರದ

**Classification:** Keerthane
**Ankita:** Sri Purandara Vittala
**Location:** NA
**Category:** Krishna Leele
**Group Words:** Krishna, ATa, ADu, Kasturi, gandha, hengasu, mancha, gopi,
**Pravachana:** NA
**Explanation:** NA